"ಹಾಗಿದ್ದರೆ, ಹಸಿವೆಂಬ ಒಡಲ ಬೆಂಕಿಯನ್ನು ತಾಮಣಿಗೊಳಿಸಿಕೊಳ್ಳಲು ಹೀಗೆ ಒಂದೊಂದು ಜೀವಿಗೆ ಒಂದೊಂದು ಪದಾರ್ಥವನ್ನು ನಿಮ್ಮ ಆ ದೇವರೇ ನಿಗದಿಗೊಳಿಸಿರುವಾಗ, ಅವುಗಳನ್ನು ಪಡೆಯಲು ಆಯಾ ಜೀವಿಗಳು ಮಾಡುವ ಪ್ರಯತ್ನದಲ್ಲಿ ಪಾಪ–ಪುಣ್ಯ ಎಂಬ ಭೇದಗಳಿವೆಯೆ?"

"ಖಂಡಿತ ಇಲ್ಲ, ಇರಬಾರದು ಕೂಡ" ಪುಣ್ಯಕೋಟಿ ಖಚಿತವಾಗಿ ಹೇಳಿತು.

"ಹಾಗಾದರೆ ಪುಣ್ಯಕೋಟಿಯಮ್ಮಾ, ಹಿಂಸೆ ಅಂದರೇನು?"

"ಒಂದು ಜೀವಿ ಮತ್ತೊಂದು ಜೀವಿಯನ್ನು ಕೊಲ್ಲುವುದೇ ಹಿಂಸೆ."

"ಕೆಲವು ಜೀವಿಗಳಿಗೆ ಆ ನಿಮ್ಮ ದೇವರು ಮಾಂಸವೇ ಆಹಾರವೆಂದು ನಿರ್ಧರಿಸಿದ್ದಾನಲ್ಲ, ಆ ಮಾಂಸ ಸಿಗುವುದಾದರೂ ಹೇಗೆ?''

"ಒಂದು ಜೀವಿ ಮತ್ತೊಂದು ಜೀವಿಯನ್ನು ಕೊಂದಾಗಲೇ ಅಲ್ಲವೆ?" ಪ್ರಶ್ನೆಯಲ್ಲೇ ಉತ್ತರಿಸಿತು ಪುಣ್ಯಕೋಟಿ.

"ಹೌದು ತಾನೆ? ಹಾಗಿದ್ದರೆ ಹುಲಿಯು ಆಕಳನ್ನು ಬೇಟೆಯಾಡಿ ತಿಂದರೆ ಅದು ಪಾಪವೆ? ಅದನ್ನು ಪಾಪವೆನ್ನುವುದಾದರೆ, ಮಾಂಸಾಹಾರಿ ಪ್ರಾಣಿಗಳನ್ನು ಆ ದೇವರು ಪಾಪ ಮಾಡಲೆಂದೇ ಹುಟ್ಟಿಸಿದನೆ? ಅವುಗಳಿಗೆ ಪುಣ್ಯವೆಂಬುದು ಇಲ್ಲವೇ ಇಲ್ಲವೆ?"

ಪುಣ್ಯಕೋಟಿ ಉತ್ತರಕ್ಕಾಗಿ ತಡಬಡಿಸತೊಡಗಿತು.

"ಅಂದರೆ ಪುಣ್ಯಕೋಟಿಯಮ್ಮ, ನಿನ್ನ ಪ್ರಕಾರ, ಜೀವಿಗಳಿಗೆ ಹಸಿವಿನ ಸಂವೇದನೆಯನ್ನು ಕೊಟ್ಟವನೂ ದೇವರೆ, ಆ ಹಸಿವನ್ನು ಹಿಂಗಿಸಿಕೊಳ್ಳಲು ಬೇರೆ ಬೇರೆ ಜೀವಿಗಳಿಗೆ ಬೇರೆ ಬೇರೆ ಮಾರ್ಗಗಳನ್ನು ತೋರಿಸಿದವನೂ ದೇವರೆ ಅಲ್ಲವೆ? ಹಾಗಿದ್ದರೆ ಇಲ್ಲಿ ಹಿಂಸೆ–ಅಹಿಂಸೆಯ ಮಾತೆಲ್ಲಿ? ಹಿಂಸೆ–ಅಹಿಂಸೆಗಳನ್ನೇ ಆಧಾರವಾಗಿಟ್ಟುಕೊಂಡು ನಿರ್ಧಾರವಾಗುವ ಪಾಪ–ಪುಣ್ಯಗಳ ಮಾತೆಲ್ಲಿ?"

ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತೂ ಕಷ್ಟವೆನಿಸಿತು ಪುಣ್ಯಕೋಟಿಗೆ.

"ಉತ್ತರ ಹೇಳು ಪುಣ್ಯಕೋಟಿಯಮ್ಮ. ಒಂದೊಮ್ಮೆ ಇದೆಲ್ಲವೂ ಸುಳ್ಳು, ಬೊಗಳೆ ಎಂದಾದರೆ, ಇಂಥ ಮೋಸದ ತಂತ್ರಗಾರಿಕೆಯನ್ನು ಹೆಣೆದವರು ಯಾರು? ದೇವರೇ? ದೇವರು ಅಲ್ಲವೆಂದಾದರೆ ಮನುಷ್ಯರೆ? ಮನುಷ್ಯರೇ ಎಂದು ನೀನು ಹೇಳುವುದಾದರೆ, ಅದೇ ಮನುಷ್ಯರು ಮಾಂಸಕ್ಕಾಗಿ ನಿನ್ನಂಥ ದೇವಜೀವಿಗಳನ್ನೂ, ಮತ್ತಿತರ ಪ್ರಾಣಿಗಳನ್ನೂ ಕೊಲ್ಲುತ್ತಾರಲ್ಲ! ಅದು ಹಿಂಸೆ ಅಲ್ಲವೆ, ಪಾಪವಲ್ಲವೆ? ಅದೂ ಇರಲಿ, ಲಾಗಾಯ್ತಿನಿಂದಲೂ ಶ್ರೇಷ್ಠವೆಂದೇ ಹೇಳಿಕೊಳ್ಳುತ್ತಿರುವ ನಿಮ್ಮ ಪರಂಪರೆಯ ಈ ಮನುಷ್ಯರೇ ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ, ಮೋಸ, ವಂಚನೆಯಂಥ ಅದೆಷ್ಟೋ ಅನೈತಿಕ ಕೆಲಸಗಳನ್ನು ಮಾಡುತ್ತಲೇ ಬಂದಿದ್ದಾರಲ್ಲ ಅದೆಲ್ಲ ಪಾಪವಲ್ಲವೆ? ಆ ಪಾಪಕ್ಕಾಗಿ ಅವರು ನನ್ನ ತಂದೆಯ ಹಾಗೆ ಪ್ರಾಣವನ್ನೇನಾದರೂ ಕಳೆದುಕೊಂಡಿದ್ದಾರೆಯೆ? ಹೇಳಮ್ಮಾ, ಯಾವೊಂದೂ ಪಾಪ ಮಾಡದೇ ಜೀವತೆತ್ತ ನನ್ನ ತಂದೆ ಪಾಪಿಯೇ? ಕಲ್ಪಿತ ಹಿಂಸೆಗೆ ಪ್ರಾಯಶ್ಚಿತವೆಂದು ನನ್ನ ತಂದೆಯನ್ನು ಕೊಂದು, ನನ್ನನ್ನು ತಬ್ಬಲಿ ಮಾಡಿದರಲ್ಲ ನಿನ್ನ ಜನ, ಇದು ಮೋಸವಲ್ಲವೆ? ಹೇಳು ಪುಣ್ಯಕೋಟಿಯಮ್ಮ ಹೇಳು, ಕೊಡು ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು... ಯಾಕೆ ಸುಮ್ಮನಿರುವೆ?..." ಆಕ್ರೋಶದಿಂದ ಕುದಿಯುತ್ತಿದ್ದ ಹುಲಿಮರಿ ಎತ್ತರದ ದನಿಯಲ್ಲಿ ತನ್ನ ಒಡಲ ಸಂಕಟವನ್ನು ತೋಡಿಕೊಳ್ಳುತ್ತಲೇ ಕೊನೆಗೆ ಗೋವಿನ ಆತ್ಮಸಾಕ್ಷಿಯನ್ನೇ ಕೆಣಕುವಂಥ ಸವಾಲೊಂದನ್ನು ಎಸೆಯುತ್ತದೆ. "ನೋಡು ಪುಣ್ಯಕೋಟಿಯಮ್ಮ, ನಾನು ನಿನ್ನನ್ನು ಅಮ್ಮ ಎಂದು ಕರೆದಿರುವೆ. ನೀನು ನಿಜವಾದ ತಾಯಿಗುಣವನ್ನೇ ಹೊಂದಿದ್ದರೆ, ನನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಟ್ಟು ನನಗೆ ನಿಜವಾದ ಧರ್ಮಮಾರ್ಗ ಯಾವುದೆಂಬುದನ್ನು ತೋರಿಸು. ಆದರೆ, ಅದಕ್ಕೂ ಮೊದಲು, ಸಾಯುವ ಸ್ಥಿತಿ ತಲುಪಿರುವ ನನಗೆ, ನಿನ್ನ ಕರುವಿನ ಜೊತೆಯೇ ಮೊಲೆಹಾಲು ಕುಡಿಸಿ,